ಕರ್ನಾಟಕ ಸರ್ಕಾರ

(ವಾಣಿಜ್ಯ ತೆರಿಗೆಗಳ ಇಲಾಖೆ)

ಸಂ.ವಿಹೆಚ್‌ಟಿ/ಸಿಆರ್.5/ಮಾಚಾ/ಟೆಂಡರ್/15-16/ಎಫ್-3

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರವರ ಕಛೇರಿ,
(ಆಡಳಿತ). ಮೌಲ್ಯವರ್ಧಿತ ತೆರಿಗೆ ವಿಭಾಗ,
ಮಂಗಳೂರು. ದಿನಾಂಕ: 19-01-2016.

## ಕಛೇರಿ ಪ್ರಕಟಣೆ

ವಿಷಯ: ಇಲಾಖಾ ಉಪಯೋಗಕ್ಕಾಗಿ 2015-16ನೇ ಸಾಲಿನಲ್ಲಿ ದಿನಾಂಕ: 01-02-2016 ರಿಂದ 31-03-2016ರ ವರೆಗೆ ಮಾಸಿಕ ಗುತ್ತಿಗೆ ಬಾಡಿಗೆ ಆಧಾರದ ಮೇಲೆ ಮಾಲಕರೇ ಚಾಲಕರಾಗಿರುವ ಅಥವಾ ಏಜೆನ್ಸಿ/ಸಂಸ್ಥೆಯ ಖಾಸಗಿ ಹವಾ ನಿಯಂತ್ರಣ ರಹಿತ (Non-AC) ವಾಹನಗಳ ಸೇವೆಯನ್ನು ಪಡೆಯುವ ಕುರಿತು.

ಉಲ್ಲೇಖ: 1. ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 96 ಶೀವಾನೀ 2012, ಬೆಂಗಳೂರು ದಿನಾಂಕ: 23-08-2012.
2. ಮಾನ್ಯ ವಾಣಿಜ್ಯ ತೆರಿಗೆಗಳ ಆಯುಕ್ತರು (ಕರ್ನಾಟಕ), ಬೆಂಗಳೂರು ಇವರ ಆದೇಶ ಸಂಖ್ಯೆ: ವಿಹೆಚ್‌ಟಿ/ಸಿಆರ್-20/2013-14(Master File) ದಿನಾಂಕ:18-01-2016.

*******

ಉಲ್ಲೇಖಿತ ಆದೇಶಗಳನ್ವಯ, ಈ ವಿಭಾಗದ ಅಧೀನದಲ್ಲಿ ಬರುವ ವಿವಿದ ಕಛೇರಿಯ ಉಪಯೋಗಕ್ಕಾಗಿ 2015-16ನೇ ಸಾಲಿನಲ್ಲಿ ದಿನಾಂಕ: 01-02-2016 ರಿಂದ 31-03-2016ರ ವರೆಗೆ ಮಾಲಕರೇ ಚಾಲಕರಾಗಿರುವ ಮಾಸಿಕ ಗುತ್ತಿಗೆ ಬಾಡಿಗೆ ಆಧಾರದ ಮೇಲೆ 2010ರ ಮತ್ತು ನಂತರದ ಮಾದರಿಯ ಖಾಸಗಿ ವಾಹನ ಸೇವೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪಾರದರ್ಶಕತೆ ಅಧಿನಿಯಮ 1999, ನಿಯಮಗಳು 2000ರ ಸೂಚನೆಗಳ ಹಾಗೂ ನಿಬಂಧನೆಗಳಿಗೆ ಒಳಪಟ್ಟು ಪಡೆಯಲು ಕೇಂದ್ರ ಕಛೇರಿಯ ನಿರ್ದೇಶನದನ್ವಯ ಟೆಂಡರ್ ಕರೆಯಲಾಗಿದೆ ಹಾಗೂ ನಿಗದಿಪಡಿಸಿದ ದರಪಟ್ಟಿಯು ಈ ಕೆಳಗಿನಂತಿದೆ.

1. ಮಾಸಿಕ 2500 ಕಿ.ಮೀ. ಅಥವಾ 300 ಗಂಟೆಗಳು — ರೂ. 25,000-00 (ಗರಿಷ್ಠ ಮೊತ್ತ)
2. 2500 ಕಿ.ಮೀ. ನಂತರ ಪ್ರತಿ ಕಿ.ಮೀ. ಗೆ — ರೂ. 5.50 (ಗರಿಷ್ಠ ಮೊತ್ತ)
3. 300 ಗಂಟೆಗಳ ನಂತರ ಪ್ರತಿ ಗಂಟೆಗೆ — ರೂ. 40.00 (ಗರಿಷ್ಠ ಮೊತ್ತ)

ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 28-01-2016 ಸಂಜೆ 5-00 ಗಂಟೆ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 29-01-2016 ಪೂರ್ವಾಹ್ನ 11-00 ಗಂಟೆ ಟೆಂಡರ್‌ನ ಅವಧಿ: 01-02-2016 ರಿಂದ 31-03-2016.

ಇಚ್ಛೆಯುಳ್ಳ ಮಾಲಕರೇ ಚಾಲಕರಾಗಿರುವ ವಾಹನಗಳು ಇವರುಗಳ ದಿನಾಂಕ: 27-01-2016ರ ಸಂಜೆ 5.00 ಗಂಟೆಯೊಳಗಾಗಿ ಅರ್ಜಿ ಪಡೆಯತಕ್ಕದ್ದು. ಅರ್ಜಿಗಳು ಈ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಲಭ್ಯವಿರುತ್ತವೆ.

ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ), ಮೌಲ್ಯವರ್ಧಿತ ತೆರಿಗೆ ವಿಭಾಗ, ವಾಣಿಜ್ಯ ತೆರಿಗೆ ಭವನ, ನೆಹರು ಮೈದಾನದ ಎದುರು, ಮಂಗಳೂರು ಈ ಕಛೇರಿಗೆ ದಿನಾಂಕ: 28-01-2016ರ ಸಂಜೆ 5.00 ಗಂಟೆ ಒಳಗೆ ತಲುಪುವಂತೆ ಸಲ್ಲಿಸತಕ್ಕದ್ದು. ದಿನಾಂಕ: 29-01-2016ರ ಪೂರ್ವಾಹ್ನ 11.00 ಗಂಟೆಗೆ ಹಾಜರಿರುವ ಬಿಡ್ಡುದಾರರ ಸುಸ್ಥಿತಿಯಲ್ಲಿರುವ ಉತ್ತಮ ಮೇಕ್ ಉಳ್ಳ ಹಾಗೂ ಇತ್ತೀಚಿನ ಹೊಸ ಮಾಡೆಲ್‌ಗಳ ವಾಹನಗಳನ್ನು ಆಯ್ಕೆ ಮಾಡಿ ಸದರಿ ಮಾಹಿತಿಯನ್ನು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು. ಆದಾಗ್ಯೂ ಯಾವುದೇ ಹಂತದಲ್ಲಿ ಟೆಂಡರ್ ಪ್ರಕ್ರಿಯೆ ಸ್ಥಗಿತಗೊಳಿಸುವ ಅಥವಾ ಮುಂದೂಡುವ ಅಧಿಕಾರವು ಇಲಾಖೆಗೆ ಇರುತ್ತದೆ.

ಆಯ್ಕೆಗೊಂಡ ವಾಹನ ಚಾಲಕರು / ಮಾಲಕರು ಅಥವಾ ಏಜೆನ್ಸಿಯವರು ಇಲಾಖೆಯಿಂದ ಸೂಚನೆ ನೀಡಿದ ಏಳು ದಿನಗಳ ಒಳಗಾಗಿ ಸೂಕ್ತ ಠೇವಣಿಯನ್ನು ಇಲಾಖೆಗೆ ಸಲ್ಲಿಸಿ, ರೂ. 200/- ಗಳ ಛಾಪಾ ಕಾಗದದ ಮೇಲೆ ಒಪ್ಪಂದ ಕರಾರು ಪತ್ರ ಮಾಡಿಕೊಂಡು ಆ ಪ್ರಕಾರ ಮುಂದುವರೆಯತಕ್ಕದ್ದು. ಯಾವುದೇ ಕಾನೂನಾತ್ಮಕ ತೊಡಕುಗಳುಂಟಾದಲ್ಲಿ ಇಲಾಖೆಯ ತೀರ್ಮಾನವೇ ಅಂತಿಮವಾಗಿರುತ್ತದೆ.

ಇತರೆ ಷರತ್ತುಗಳು ಮತ್ತು ಸೂಚನೆಗಳನ್ನು ಕಛೇರಿ ವೇಳೆಯಲ್ಲಿ ಕಛೇರಿಯಿಂದ ಪಡೆಯಬಹುದು.

ವಾಣಿಜ್ಯ ತೆರಿಗೆಗಳ ಜಂಟಿ ಆಯುಕ್ತರು (ಆಡಳಿತ),
ಮೌಲ್ಯವರ್ಧಿತ ತೆರಿಗೆ ವಿಭಾಗ, ಮಂಗಳೂರು.
ಮಂಗಳೂರು

ಪ್ರತಿಯನ್ನು:

1. ಸೂಚನಾ ಫಲಕಕ್ಕೆ.
2. ಕಛೇರಿ ಪತ್ರ.